# ಟೆನಿಸ್ ಲೋಕದ ಕೃಷ್ಣಸುಂದರಿ



ಕಪ್ಪುವರ್ಣೀಯೆ ಎಂಬ ಮೂದಲಿಕೆ ಅನುಭವಿಸಿದ ನಂತರ, ತಿರಸ್ಕೃತಗೊಂಡ ಸಮಾಜದಿಂದಲೇ ಭೇಷ್ ಎನಿಸಿಕೊಂಡ ಕೃಷ್ಣ ಸುಂದರಿ ಸೆರೆನಾ ವಿಲಿಯಮ್ಸ್. ಅವರ ಸಾಧನೆ ಬೇಗನೆ ಪದಗಳಿಗೆ ನಿಲುಕುವಂತದ್ದಲ್ಲ. ಈಗ ಅವರು ಸ್ಟೆಫಿ ಗ್ರಾಫ್ ದಾಖಲೆಯನ್ನು ಮೀರಿ ನಿಂತಿದ್ದಾರೆ. ಸೆರೆನಾ ಹೆಸರು ಟೆನಿಸ್ ಕ್ಷಿತಿಜದಲ್ಲಿ ಯಾವಾಗಲೂ ನಕ್ಷತ್ರವಾಗಿ ಮಿನುಗುತ್ತಿರುತ್ತದೆ.

★ ಪ್ರಮೋದ ಜಿ.ಕೆ.

'ಅವಮಾನ ಮತ್ತು ಬಡತನ ಕಲಿಸುವ ಪಾಠವನ್ನು ಜಗತ್ತಿನ ಯಾವ ವಿಶ್ವವಿದ್ಯಾಲಯವೂ ಕಲಿಸುವುದಿಲ್ಲ' ಎನ್ನುವುದು ಇದೇ ಕಾರಣಕ್ಕೆ ಇರಬೇಕೇನೋ? ಆಕೆ ಒಂದು ಕಾಲದಲ್ಲಿ ತನ್ನದೇ ದೇಶದ ಜನರಿಂದ ತಿರಸ್ಕೃತಳಾಗಿದ್ದಳು. ಕಪ್ಪುವರ್ಣೀಯೆ ಎಂಬ ಒಂದೇ ಒಂದು ಕಾರಣಕ್ಕೆ ಸಾಕಷ್ಟು ಮೂದಲಿಕೆ ಅನುಭವಿಸಿದ್ದಳು. ಈಗ ಆಕೆಯನ್ನು 'ಟೆನಿಸ್ ಲೋಕದ ಮಹಾರಾಣಿ' ಎಂದು ಅದೇ ದೇಶದ ಜನ ಹೆಮ್ಮೆಯಿಂದ ಹೇಳುತ್ತಾರೆ.

ಹೀಗೆ ಸಾಕಷ್ಟು ಅವಮಾನ ಅನುಭವಿಸಿರುವ ಟೆನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್. ಅಮೆರಿಕದ ಸೆರೆನಾ ವರ್ಷದ ಮೊದಲ ಗ್ರ್ಯಾನ್ ಸ್ಲಾಮ್ ಟೂರ್ನಿಯಾದ ಆಸ್ಟ್ರೇಲಿಯಾ ಓಪನ್‌ನ ಸಿಂಗಲ್ಸ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ. ಇದು ಸೆರೆನಾ ಗೆದ್ದ 23ನೇ ಟ್ರೋಫಿ. ಈ ಮೂಲಕ ಅವರು ಜರ್ಮನಿಯ ಸ್ಟೆಫಿ ಗ್ರಾಫ್ (22 ಗ್ರ್ಯಾನ್ ಸ್ಲಾಮ್ ಪ್ರಶಸ್ತಿ) ಹೆಸರಿನಲ್ಲಿದ್ದ ದಾಖಲೆಯನ್ನು ಅಳಿಸಿ ಹಾಕಿದ್ದಾರೆ.

35 ವರ್ಷವಾದರೂ ವಯಸ್ಸು ಎಂಬುದು ಸಂಖ್ಯೆಯಷ್ಟೇ ಎನ್ನುವ ಸೆರೆನಾ, ಹೊಂದಿರುವ ಆಕರ್ಷಕ ಮೈಕಟ್ಟು, ತೋಳುಗಳಲ್ಲಿ ತುಂಬಿರುವ ಕಸುವು ಅವರನ್ನು ವರ್ಷದಿಂದ ವರ್ಷಕ್ಕೆ ಎತ್ತರಕ್ಕೆ ಕೊಂಡೊಯ್ಯುತ್ತಿದೆ. ವಿಶ್ವ ರ್‍ಯಾಂಕ್‌ನಲ್ಲಿ ಅಗ್ರಸ್ಥಾನದಲ್ಲಿರುವ ಅವರು ಆಸ್ಟ್ರೇಲಿಯಾ ಓಪನ್‌ನಲ್ಲಿ ಏಳು, ಫ್ರೆಂಚ್ ಓಪನ್‌ನಲ್ಲಿ ಮೂರು, ವಿಂಬಲ್ಡನ್‌ನಲ್ಲಿ ಏಳು ಮತ್ತು ಅಮೆರಿಕ ಓಪನ್‌ನಲ್ಲಿ ಆರು ಗ್ರ್ಯಾನ್ ಸ್ಲಾಮ್ ಟ್ರೋಫಿಗಳನ್ನು ಎತ್ತಿ ಹಿಡಿದಿದ್ದಾರೆ. ಬಲಗೈ ಆಟಗಾರ್ತಿ 1999ರಲ್ಲಿ ಅಮೆರಿಕ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು. ಇದು ಅವರು ಗ್ರ್ಯಾನ್ ಸ್ಲಾಮ್‌ನಲ್ಲಿ ಗೆದ್ದ ಚೊಚ್ಚಲ ಪ್ರಶಸ್ತಿ. ಆಗ ಸೆರೆನಾ ವಯಸ್ಸು ಕೇವಲ 17 ವರ್ಷ!

### ಬೆಂಕಿಯಲ್ಲಿ ಅರಳಿದ ಹೂ

ಈ ಪ್ರಶಸ್ತಿ ಗೆಲ್ಲುವುದಕ್ಕೂ ಮೊದಲು 'ಟೆನಿಸ್ ಕ್ವೀನ್' ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ. ಕಿತ್ತು ತಿನ್ನುವ ಬಡತನ, ಹಿರಿಯಕ್ಕನ ಕೊಲೆ, ಮಕ್ಕಳನ್ನು ಟೆನಿಸ್ ಆಟಗಾರ್ತಿಯರನ್ನಾಗಿ ಮಾಡಬೇಕೆನ್ನುವ ಅಪ್ಪ ರಿಚರ್ಡ್ ವಿಲಿಯಮ್ಸ್ ಅವರ ದಿಟ್ಟ ಹೋರಾಟ ಈ ಎಲ್ಲಾ ಸಂಕಷ್ಟಗಳು ಇವರ ಸಾಧನೆಗೆ ಸ್ಫೂರ್ತಿಯಾಗಿವೆ. ಎಲ್ಲಕ್ಕಿಂತ ಹೆಚ್ಚಾಗಿ ಟೆನಿಸ್ ಕ್ರೀಡೆಯನ್ನು ಯಾಕೆ ಅಷ್ಟೊಂದು ಗಾಢವಾಗಿ ಪ್ರೀತಿಸುತ್ತೇನೆ ಎಂದು ಅದೊಮ್ಮೆ ಮಾಧ್ಯಮಗಳ ಮುಂದೆ ಬಹಿರಂಗ ಮಾಡಿದ್ದರು.

